## AMBALIGOL RESERVOIR

47. Sri K. YENKATAPPA (Shikaripur).—

Will the Minister of State for Major Irrigation be pleased to state :—

(*a*) whether Government proposes to increase the height of spillway and bund of Ambaligol reservoir;

(*b*) if so, the action taken by Government so far in this behalf ?

Sri H. N. NANJE GOWDA (Minister of State for Major Irrigation).—

(*a*) and (*b*) The matter is under consideration of Government.

ಶ್ರೀ ಕೆ. ಯಂಕಟಪ್ಪ.—ಉತ್ತರದಲ್ಲಿ ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿ ಇದೆ ಎಂದು ಹೇಳಿದ್ದೀರಿ. ಸರ್ಕಾರದ ಪರಿಶೀಲನೆಯಲ್ಲಿ ಯಾವ ಮಟ್ಟದಲ್ಲಿ ಇದೆ; ಎಷ್ಟು ದಿವಸಗಳಲ್ಲಿ ಆಗಬಹುದು ?

ಶ್ರೀ ಎಚ್. ಎನ್. ನಂಜೇಗೌಡ.—ಮೊದಲು ಜಲಾಶಯದ ಏರಿಯನ್ನು ಎತ್ತರಿಸಬೇಕು ಎಂದು ಅಲೋಚನೆ ಮಾಡಲಾಗಿತ್ತು. ಆದರಿಂದ ನೀರಾವರಿ ಅನುಕೂಲ ಇದ್ದದ್ದು 2 ಸಾವಿರ ಎಕರೆಗೆ ಆದರೆ 500 ಎಕರೆ ಮುಳುಗಡೆ ಆಗುವುದು ಇತ್ತು ಮತ್ತು ಒಂದು ಸಾವಿರ ಎಕರೆ ಪ್ರಪೋಸ್ಡ್ ಕಳ್ಳುವೊಡ್ಡು ಪ್ರಾಜೆಕ್ಟ್ ಕೆಳಗೆ ಓವರ್‌ಲ್ಯಾಪ್ ಆಗುವ ಪರಿಸ್ಥಿತಿ ಇತ್ತು. ಆದುದರಿಂದ ಇದನ್ನು ಬದಲಾಯಿಸಿ ಎಡದಂಡೆ ನಾಲಾವನ್ನು 10 ಮೈಲಿಗಳಷ್ಟು ಮಾಡಬೇಕು ಎನ್ನುವ ಉದ್ದೇಶ ಇಟ್ಟುಕೊಂಡು ಅದಕ್ಕಾಗಿ ಇನ್‌ವೆಸ್ಟಿಗೇಷನ್ ಹೊಸದಾಗಿ ನಡೆಸುತ್ತಿದ್ದೇವೆ.

ಶ್ರೀ ಕೆ. ಯಂಕಟಪ್ಪ.—ತಾವು ನಾಲೆಯನ್ನು ಉದ್ದಪಡಿಸುವ ಕಾರ್ಯವನ್ನು ಮಾಡಬಹುದು ಎಂಬುದಾಗಿ ಅಲೋಚನೆ ಮಾಡುತ್ತಿದ್ದೇವೆ ಎಂದು ಹೇಳಿದಿರಿ, ಇತ್ತೀಚೆಗೆ ಮಲೆನಾಡಿನಲ್ಲಿ ಮಳೆ ಕಡಿಮೆಯಾಗಿರುವುದರಿಂದ ಸ್ಪಿಲ್‌ವೇ ಎತ್ತರಿಸದಿದ್ದರೆ ಕೊಡತಕ್ಕ ನೀರು ಸಾಕಾಗದೆ ಇರುವುದರಿಂದ ಎತ್ತರ ಮಾಡುವುದು ಅನುಕೂಲವಲ್ಲವೇ ?

ಶ್ರೀ ಎಚ್.ಎನ್. ನಂಜೇಗೌಡ.—ಆ ಪ್ರದೇಶದಲ್ಲಿ ಕಳ್ಳುವೊಡ್ಡು ಪ್ರಾಜೆಕ್ಟು ಆಗುವುದರಿಂದ ಪ್ರಾಸ್ಪೆಕ್ಟಿವಾಗಿ ಏರಿಯನ್ನು ಎತ್ತರಿಸುವುದರಿಂದ, ಸಾಗುವಳಿಯಾಗುವುದು ಒಂದು ಸಾವಿರ ಎಕರೆ ಮುಳುಗಡೆಯಾಗುವುದು ಐನೂರು ಎಕರೆಯಾಗುತ್ತದೆ. ಆದ್ದರಿಂದ ಇದು ಸಾಧ್ಯವಿಲ್ಲವೆಂದು ಸರ್ಕಾರದ ಅಭಿಪ್ರಾಯ.

Sri B. B. SAYANAK.—Since how many years this matter is under the consideration of Government ?

Sri H. N. NANJE GOWDA.—It was being investigated. Now the Government came to the conclusion that what was being investigated and proposed is not feasible. Hence we have taken up the alternative proposals, *i.e.*, the extension of the I.V.C. Canal.